# ನಿಮ್ಮೊಡನೆ

## ಆಸೆಯೇ ಸಾವಿಗೆ ಕಾರಣ

**ಹುಲಿಗಳು ಮನುಷ್ಯನ ತಂಟೆಗೆ ಬಾರದೆ ಇರಬೇಕಾದರೆ ಅರಣ್ಯದಲ್ಲಿ ಅವುಗಳ ಆವಾಸ ತಾಣಗಳ ಒತ್ತುವರಿ ಆಗಬಾರದು. ಅರಣ್ಯಗಳ ನಿರಂತರ ಅತಿಕ್ರಮಣದಿಂದ ಹುಲಿಗಳ ಆವಾಸ ಸ್ಥಾನ ಕಡಿಮೆಯಾಗುತ್ತಿದೆ. ಇದರಿಂದಾಗಿ ವಯಸ್ಸಾದ ಮತ್ತು ಕಿರಿಯ ವಯಸ್ಸಿನ ಹುಲಿಗಳು ಕಾಡಿನಂಚಿಗೆ ತಳ್ಳಲ್ಪಡುತ್ತವೆ. ಇದು ಮನುಷ್ಯನ ಸಾವಿನಲ್ಲಿ ಪರ್ಯಾವಸನವಾಗುತ್ತದೆ!**

ಕಳೆದ ಎರಡು ವಾರಗಳಲ್ಲಿ ಹುಲಿ ದಾಳಿಗೆ ನಾಲ್ವರು ಬಲಿಯಾಗಿದ್ದಾರೆ. ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಮೂವರು, ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ಒಬ್ಬರು ವ್ಯಾಘ್ರನ ದಾಳಿಗೆ ತುತ್ತಾದ ನತದೃಷ್ಟರು. ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಚಿಕ್ಕಬರಗಿ ಗ್ರಾಮದ ಬಸಪ್ಪ ಎಂಬುವರನ್ನು ಡಿ.3ರಂದು ಹೊತ್ತೊಯ್ದು ತಿಂದು ಹಾಕಿದ ವ್ಯಾಘ್ರನನ್ನು ವಿಶೇಷ ಕಾರ್ಯಾಚರಣೆಯಲ್ಲಿ ಹೆಡಿಯಾಲ ಅರಣ್ಯ ವಲಯದ ಕಾರೆಕಟ್ಟೆ ಬಳಿ ಹಿಡಿದು ಹಾಕುವ ಮೂಲಕ ಈ ಭಾಗದ ಜನರಲ್ಲಿ ಉಂಟಾಗಿದ್ದ ಆತಂಕವನ್ನು ಅಷ್ಟರಮಟ್ಟಿಗೆ ದೂರ ಮಾಡಲಾಗಿದೆ. ನರಭಕ್ಷಕ ಹುಲಿಯನ್ನು ಜೀವಂತ ಸೆರೆ ಹಿಡಿಯುವ ಬದಲು ಸಾಯಿಸಿ ಬಿಡಬೇಕಿತ್ತು ಎಂಬ ಅಭಿಪ್ರಾಯಗಳೂ ಮೂಡಿಬಂದಿವೆ.

ಬಸಪ್ಪನನ್ನು ಕೊಂದದ್ದು ಈಗ ಸೆರೆಸಿಕ್ಕಿರುವ ಹುಲಿಯೆ? ಅದು ನರಭಕ್ಷಕ ಆಗಿತ್ತೆ ಎಂಬುದು ಖಚಿತವಾಗಬೇಕಿದೆ. ಅದಕ್ಕಾಗಿ ಹುಲಿಯ ಎರಡು ದಿನಗಳ ಮಲ, ಮೂತ್ರ, ರಕ್ತ ಸಂಗ್ರಹಿಸಿ ಹೈದರಾಬಾದ್ ಮತ್ತು ಬೆಂಗಳೂರು ಪ್ರಯೋಗಾಲಯಗಳಿಗೆ ಕಳಿಸಲಾಗಿದೆ. ಮಲಮೂತ್ರದಲ್ಲಿ ಮಾನವನ ಡಿಎನ್‌ಎ ಪತ್ತೆಯಾದರೆ ಅದು ನರಭಕ್ಷಕ ಎಂಬುದರಲ್ಲಿ ಯಾವುದೇ ಸಂಶಯ ಉಳಿಯುವುದಿಲ್ಲ.

2006ರಲ್ಲಿ ಕೊಡಗಿನಲ್ಲಿ ಹೆಣ್ಣು ಹುಲಿಯೊಂದು ಇಬ್ಬರನ್ನು ಬಲಿ ತೆಗೆದುಕೊಂಡ ನಂತರ ನಡೆದ ಘೋರ ಕೃತ್ಯ ಇದು.

ಅನಾದಿ ಕಾಲದಿಂದಲೂ ಆನೆ, ಹುಲಿ, ಸಿಂಹದಂತಹ ಮೃಗಗಳ ಭೀತಿಯಲ್ಲೇ ಮನುಷ್ಯ ಬದುಕಿದ್ದಾನೆ. ತನ್ನ ಪ್ರಾಣಕ್ಕೆ ಸಂಚಕಾರ ಇರುವುದು ಎಲ್ಲಕ್ಕಿಂತ ಹೆಚ್ಚಾಗಿ ಮನುಷ್ಯರಿಂದಲೇ ಎಂದು ಈ ಮೃಗಗಳು ಎಂದಿನಿಂದಲೂ ಭಾವಿಸಿವೆ. ತನ್ನನ್ನು ರಕ್ಷಿಸಿಕೊಳ್ಳಲು ಮನುಷ್ಯನಿಗೆ ಹೆಚ್ಚಿನ ಅವಕಾಶ ಇದೆ. ಆದರೆ ಪ್ರಾಣಿಗಳಿಗೆ ಇಲ್ಲ. ತಮ್ಮ ಪಾಡಿಗೆ ತಾವು ಬದುಕಲು ಬಿಟ್ಟರೆ, ಬಹುಶಃ ಅವು ಮನುಷ್ಯನ ಮೇಲೆ ದಾಳಿ ಮಾಡಲಾರವು.

ಹುಲಿಗಳು ಮನುಷ್ಯನ ತಂಟೆಗೆ ಬಾರದೆ ಇರಬೇಕಾದರೆ ಅರಣ್ಯದಲ್ಲಿ ಅವುಗಳ ಆವಾಸ ತಾಣಗಳ ಒತ್ತುವರಿ ಆಗಬಾರದು. ಹುಲಿಯೊಂದರ ವಾಸ ಕ್ಷೇತ್ರ 30ರಿಂದ 50 ಚದರ ಕಿಲೋಮೀಟರ್ ಇರಬೇಕು. ಆದರೆ ಪ್ರತಿ 100 ಚ.ಕಿ.ಮೀ.ಗೆ 15ಕ್ಕಿಂತ ಹೆಚ್ಚು ಹುಲಿಗಳು ವಾಸಿಸಬೇಕಾದ ಇಕ್ಕಟ್ಟು ನಿರ್ಮಾಣವಾದಾಗ ಅವು ಆವಾಸಕ್ಕಾಗಿ ಹೊಡೆದಾಟ ನಡೆಸುತ್ತವೆ. ಇದರಿಂದ ವಯಸ್ಸಾದ ಮತ್ತು ಕಿರಿಯ ವಯಸ್ಸಿನ ಹುಲಿಗಳು ಕಾಡಿನಂಚಿಗೆ ತಳ್ಳಲ್ಪಡುತ್ತವೆ. ಹುಲಿಗೆ ವರ್ಷಕ್ಕೆ 50 ಪ್ರಾಣಿಗಳು ಆಹಾರಕ್ಕೆ ಬೇಕು. ಆದರೆ ನಾಡಕಡೆಗೆ ತಳ್ಳಲ್ಪಟ್ಟ ಹುಲಿಗೆ ಆ ಪ್ರಮಾಣದ ಆಹಾರ ದೊರೆಯದೇ ಹೋಗುತ್ತದೆ. ಅದು ಮನುಷ್ಯನ ಸಾವಿನಲ್ಲಿ ಪರ್ಯಾವಸನವಾಗುತ್ತದೆ. ಕಾಡುಹಂದಿ, ಕಡವೆ, ಜಿಂಕೆ, ಮೊಲ, ಬರ್ಕ, ಕಾಡುಕುರಿಯನ್ನು ಮನುಷ್ಯ ಹೆಚ್ಚಾಗಿ ಬೇಟೆಯಾಡಿದರೆ, ಹುಲಿಗೆ ತನ್ನ ಆಹಾರ ಸಾಲದಾಗಿ ಗ್ರಾಮಗಳಿಗೆ ಬಂದು ಜಾನುವಾರುಗಳನ್ನು ಹೊತ್ತೊಯ್ಯುತ್ತದೆ.

ಹುಲಿ ಮನುಷ್ಯನ ತಂಟೆಗೆ ಬರಬಾರದು. ಹಾಗೆಯೇ ಅವುಗಳ ರಕ್ಷಣೆಯೂ ಆಗಬೇಕು ಎಂಬ ಕಾರಣಕ್ಕೆ ವನ್ಯಜೀವಿ (ಸಂರಕ್ಷಣೆ) ಕಾಯ್ದೆ 1972ನ್ನು ಜಾರಿಗೊಳಿಸಲಾಗಿದೆ. ನಂತರ ಹುಲಿಗಳ ಸಂರಕ್ಷಣಾ ಯೋಜನೆ ಕರ್ನಾಟಕದಲ್ಲಿ ಯಶಸ್ವಿಯಾಗೇ ನಡೆದಿದೆ ಎಂದು ಸಮೀಕ್ಷೆಯೊಂದು ಹೇಳುತ್ತದೆ. 2010ರ ಹುಲಿಗಣತಿ ಪ್ರಕಾರ ರಾಜ್ಯದಲ್ಲಿ 300 ಹುಲಿಗಳಿವೆ. ಬಂಡೀಪುರ, ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿದ್ದು, ಪ್ರತಿ ನೂರು ಚ.ಕಿ.ಮೀ.ನಲ್ಲಿ 10ರಿಂದ 15 ಹುಲಿಗಳಿವೆ. ಈ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗಬೇಕಾದರೆ ಹುಲಿಯ ಆವಾಸ ಸ್ಥಾನದ ಅತಿಕ್ರಮಣ ಆಗಬಾರದು. ನಮ್ಮಂತೆ ಪ್ರಾಣಿಗಳಿಗೂ ಬದುಕುವ ಹಕ್ಕಿದೆ. ಪ್ರಕೃತಿ ಸಮತೋಲನ ತಪ್ಪಬಾರದು ಎಂದಾದರೆ ಅರಣ್ಯ ಸಮೃದ್ಧವಾಗಿರಬೇಕು. ಅದರ ಮೇಲೆ ಅತ್ಯಾಚಾರ ನಡೆಸಬಾರದು. ‘ಎನ್ನ ಒಡಹುಟ್ಟಕ್ಕ ನೀನು, ನಿನ್ನ ಕೊಂದು ನಾನೇನು ಪಡೆವೆನು?’ ಎಂದು ಗೋವಿಗೆ ಭಾಷೆ ಕೊಟ್ಟು ತನ್ನ ಪ್ರಾಣವನ್ನೇ ನೀಗಿಕೊಂಡ ಹುಲಿರಾಯನ ನಾಡಿನಲ್ಲಿ, ಅವನ ಪಾಡಿಗೆ ಅವನನ್ನು ಬದುಕಲು ಬಿಡಬೇಕು. ಆಗ ಅವು ಮನುಷ್ಯನ ತಂಟೆಗೆ ಬಾರವು.

ಕಾಡನ್ನು ಅತಿಯಾಗಿ ಒತ್ತುವರಿ ಮಾಡುವುದರಿಂದ ಹುಲಿಗಳ ಆವಾಸ ಸ್ಥಾನ ಕಡಿಮೆಯಾಗಿ, ಬಸಪ್ಪರಂತಹ ರೈತ ಬಲಿಪಶು ಆಗಬೇಕಾಗುತ್ತದೆ. ಸತ್ತ ನಾಲ್ವರೂ ಶ್ರಮಜೀವಿಗಳು. ಆದರೆ ಕಾಡನ್ನು ಕಡಿಯುತ್ತ ನಾಡನ್ನು ಕಟ್ಟುವ ಒಟ್ಟಾರೆ ಮನುಷ್ಯನ ದುರಾಸೆಯ ಫಲ ಇದು. ‘ಆಸೆ ದುಃಖಕ್ಕೆ ಮಾತ್ರವಲ್ಲ, ಸಾವಿಗೂ ಮೂಲ’ವಾಗುತ್ತದೆ ಎಂಬುದಕ್ಕೆ ಮೃಗರಾಜನ ದಾಳಿಗಳೇ ಎಚ್ಚರಿಕೆಯ ಗಂಟೆಗಳು.

■ **ಗುಡಿಹಳ್ಳಿ ನಾಗರಾಜ**



ಈಶ್ವರ್